ಜನತಾ ಬಜಾರ್ ಹಾಗೂ ನ್ಯಾಯಬೆಲೆ ಅಂಗಡಿ ಮುಖೇನ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗುವುದು.

ಇ) ಸರ್ಕಾರವು ಸ್ತ್ರೀಶಕ್ತಿ ಬ್ಯಾಂಕ್ ಸ್ಥಾಪಿಸಲು 2003–04ನೆ ಸಾಲಿನಲ್ಲಿ ಪ್ರಸ್ತಾಪಿಸಿದ್ದು ಬ್ಯಾಂಕ್ ಸ್ಥಾಪಿಸಲು ರಿಸರ್ವ್ ಬ್ಯಾಂಕ್‌ನಿಂದ ಅನುಮತಿ ದೊರೆತಿರುವುದಿಲ್ಲ.

564(518) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಾಸಗಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ವಿಶೇಷ ಉದ್ಯೋಗ ಗುಂಪಿನ ಕುಶಲಕರ್ಮಿಗಳಿಗೆ (ಹಮಾಲರಿಗೆ) ವಸತಿ ನಿರ್ಮಿಸಲು ಸಾಲ ಮತ್ತು ಅನುಧಾನ ನೀಡುವ ಯೋಜನೆ ಜಾರಿಯಲ್ಲಿದ್ದರೂ ಮಾರುಕಟ್ಟೆ ಸಮಿತಿ ನಿವೇಶನ ಒದಗಿಸದೆ ಇದ್ದ ಕಾರಣ ಈ ಯೋಜನೆ ಸ್ಥಗಿತಗೊಂಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸವದತ್ತಿ ಕೃಷಿ ಉತ್ಪನ್ನ ಮಾರುಕಟ್ಟೆಯ ಹಮಾಲರಿಗೆ ಮನೆ ನಿರ್ಮಿಸಲು ನಿವೇಶನ ಒದಗಿಸುವ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಪ್ರಕಾಶ ಭ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಇಲ್ಲ ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಯಲ್ಲಿ ಪ್ರಾಂಗಣದ ಒಳಗಡೆ ಹಾಗೂ ಹೊರಗಡೆ ಲಭ್ಯವಿರುವ ನಿವೇಶನಗಳಲ್ಲಿ ಈ ಯೋಜನೆ ಕಾರ್ಯಗತಗೊಳಿಸ ಲಾಗುತ್ತಿದೆ. ನಿವೇಶನಗಳಿಗಾಗಿ ಸೂಕ್ತ ಜಾಗದ ಲಭ್ಯತೆ ಇಲ್ಲದೇ ಇರುವ ಕಡೆ ಈ ಯೋಜನೆ ಕುಂಠಿತಗೊಂಡಿದೆ.

ಆ) ಈ ಯೋಜನೆಗಾಗಿ ಸೂಕ್ತ ಜಾಗವನ್ನು ಮಾರುಕಟ್ಟೆ ಸಮಿತಿ ಗುರುತಿಸಿ ವಶಕ್ಕೆ ಪಡೆದು ಕಾರ್ಯಗತಗೊಳಿಸುವುದು.

565(1080) ಶ್ರೀ ಮರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಹಕಾರ ಸಂಘಗಳಲ್ಲಿ ಹಾಗೂ ಸಹಕಾರಿ ಬ್ಯಾಂಕ್‌ಗಳಲ್ಲಿ ಪಡೆದಂತಹ ರೈತರ ಕೃಷಿ ಸಾಲದ ಮೇಲಿನ ಬಡ್ಡಿಯನ್ನು 1–3–2002 ರಿಂದ 30–9–2002ರವರೆಗೆ ಪಡೆದ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಅವಧಿಗೂ ಮೊದಲು ಸಾಲ ಮರುಪಾವತಿ ಮಾಡಿ ಹೊಸ ಸಾಲ ಪಡೆದ ರೈತರಿಗೆ ಬಡ್ಡಿ ಮನ್ನಾ ಸಿಗದಿರುವ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು;

ಇ) 2001 ರಿಂದ 1–3–2002ರವರೆಗೆ ಸಾಲ ಮರು ಪಾವತಿ ಮಾಡಿ ಹೊಸ ಸಾಲ ಪಡೆದವರಿಗೂ ಕೂಡ ಬಡ್ಡಿ ಮನ್ನಾ ಆಗಬೇಕಾಗಿದ್ದರಿಂದ, ಈ ಮೊದಲು ಪಾವತಿಸಿದಂತಹವರಿಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;